

ಯಾತಕ್ಕೂ ಬ್ಯಾಡದ ಗುಳ್ಳೆದನಗಳನ್ನು ಮಾರಿ ಕರಾವಿಗೆ ಒಂದು ಹಸು ಹಾಗೂ ಒಂದು ಜತೆ ಬೇಸಾಯದ ಎತ್ತು ಉಳಿಸಿಕೊಂಡು ಅವುಗಳನ್ನು ತಾವು ಕೆಲಸ ಮಾಡಲು ಹೋಗುವ ಜಮೀನು ಕಡೆಗೆ ಹಿಡಿದುಕೊಂಡು ಹೋಗಿ, ಅಲ್ಲಿ ಕಟ್ಟಿ ಹಾಕಿಯೋ, ಇಲ್ಲಾ ಬಿಟ್ಟೋ ಮೇಯಿಸುತ್ತಿದ್ದರು. ಹಾಗಾಗಿ ಅದುವರೆಗೂ ಕೊಟ್ಟಿಗೆ ತುಂಬಾ ಇದ್ದ ದನಗಳನ್ನು ಹೊರಡಿಸಿ ಕಾಡಿನ ಕಡೆ ಬಿಟ್ಟುಕೊಂಡು ಹೋಗಿ ಮೇಯಿಸಿಕೊಂಡು ಬರುತ್ತಿದ್ದ ಮಾಟಣ್ಣ ನಿರುದ್ಯೋಗಿಯಾದ.

ಪಾಳು ಬಿದ್ದಿದ್ದ ಅಗಾಡಿಯಲ್ಲಿ ಏನಾದರೂ ವರಮಾನದ ಹಾದಿ ಹುಡುಕುತ್ತಿದ್ದ. ಮಗ-ಸೊಸೆ ಸುಮ್ಮನೆ ಮಂಕಾಗಿ ಮನೆಯಲ್ಲಿ ಕುಳಿತಿರುತ್ತಿದ್ದ ಮಾಟಣ್ಣನನ್ನು ಆ ಕಡೆ ಹೋಗಿ ಕಾಲಾಡಿಕೊಂಡು ಬರುವಂತೆ ಸಲಹೆ ಕೊಟ್ಟಿದ್ದರು.

ಕೆಲವಾರು ವರ್ಷಗಳಿಂದ ಪಾಳು ಬಿದ್ದಿದ್ದ ಆ ತರಿ ಜಮೀನು ನೀರು ತಡೆದು ನಿಂತು ಜೊಂಡು ಹುಲ್ಲು, ಕಾಡುಕೆಸ ಮುಂತಾದವು ಬೆಳೆದುಕೊಂಡು ಹಾಳು ಹಡ್ಲಾಗಿತ್ತು. ಅದರ ಸುತ್ತ ಕಾಡುಗುತ್ತಿಗಳೆಲ್ಲಾ ಬೆಳೆದು ಅಗಾಡಿಯೊಳಕ್ಕೆ ಬಾಗಿಕೊಂಡಿದ್ದವು. ವಯಸ್ಸು ಎಪ್ಪತ್ತರ ಕಡೆ ಸಾಗುತ್ತಿದ್ದರೂ ಮಾಟಣ್ಣನಿಗೆ ಕೆಲಸ ಮಾಡುವ ಉತ್ಸಾಹ ಇತ್ತು. ಸುತ್ತಲಿನ ಅಡಗಬ್ಬನ್ನೆಲ್ಲಾ ಕಡಿದು ಬಯಲು ಮಾಡಿದ. ಸಣ್ಣ ಗುದ್ದಲಿ ತೆಗೆದುಕೊಂಡು ಸುತ್ತ ಸಣ್ಣ ಕಾಲುವೆ ಮಾಡಿ ನಿಂತ ನೀರೆಲ್ಲಾ ಸೀದು ಹೋಗುವಂತೆ ಮಾಡಿದ.

ಅಲ್ಲಿಗೆ ಬರತೊಡಗಿದ ಮೇಲೆ ಊರಿನ ತನ್ನ ಸಮವಯಸ್ಕರು ಹಲವರು ಭೇಟಿಯಾಗುತ್ತಿದ್ದರು. ಅವರ ತೋಟಗಳೆಲ್ಲಾ ಅಲ್ಲೇ ಆಸುಪಾಸಿನಲ್ಲಿದ್ದವು. ಬಾಲಪ್ಪ ಎಂಬ ಪೂಜಾರಿ ಆ ತೋಟಗಳಲ್ಲೆಲ್ಲಾ ಬೈನೆಸೇಂದಿ ಉತ್ಪಾದನೆ ಮಾಡುತ್ತಿದ್ದ.

ಯಥೇಚ್ಛವಾಗಿ ಉತ್ಪಾದನೆಯಾಗುತ್ತಿದ್ದ ಸೇಂದಿಯಲ್ಲಿ ತೋಟದವರ ಪಾಲು ಕೊಟ್ಟು ಉಳಿದದ್ದನ್ನು ಪಕ್ಕದ ಊರಿನವರಿಗೆ ಮಾರಿಕೊಳ್ಳುತ್ತಿದ್ದ.